# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2147**

ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 18-03-2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ವಾಯುಮಾಲಿನ್ಯ ಪರೀಕ್ಷಾ (ಎಮಿಷನ್) ಪ್ರಮಾಣ ಕೇಂದ್ರಗಳು ಎಮಿಷನ್ ಟೆಸ್ಟ್ ದಂಧೆಯಲ್ಲಿ ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಆನ್‌ಲೈನ್ ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳಲ್ಲಿ ಅಕ್ರಮಗಳು ನಡೆಯುತ್ತಿರುವ ಬಗ್ಗೆ ಇಲಾಖೆಗೆ ಸಲ್ಲಿಸಲ್ಪಟ್ಟ ಹಲವಾರು ದೂರುಗಳನ್ನು ಆಧರಿಸಿ ಆನ್‌ಲೈನ್ ನೆಟ್‌ವರ್ಕಿಂಗ್ ತಂತ್ರಾಂಶದಲ್ಲಿ ದೋಷವಿರುವ ಬಗ್ಗೆ ಪರಿಶೀಲಿಸಿ ತಕ್ಷಣವೇ ವರದಿ ನೀಡುವಂತೆ ಮೆ// ಕಿಯೋನಿಕ್ಸ್ ಸಂಸ್ಥೆಯವರಿಗೆ ತಿಳಿಸಲಾಗಿತ್ತು. ಈ ಬಗ್ಗೆ ಮೆ// ಕಿಯೋನಿಕ್ಸ್ ಸಂಸ್ಥೆಯವರು ಕೇಂದ್ರಗಳ ಕಾರ್ಯಾಚರಣೆ ಮತ್ತು ತಂತ್ರಾಂಶವನ್ನು ಪರಿಶೀಲಿಸಲಾಗಿ ಯಾವುದೇ ನ್ಯೂನತೆಗಳು ಕಂಡುಬಂದಿರು-ವುದಿಲ್ಲವೆಂದು ವರದಿ ಮಾಡಿರುತ್ತಾರೆ. ಸಿ.ಸಿ.ಬಿ. ಪೊಲೀಸರು ಸಹ ಆರು ಕೇಂದ್ರಗಳ ಮೇಲೆ ದಾಳಿ ನಡೆಸಿ ಗ್ರೀನ್ ಸಿಟಿ, ಹರ್ಷಿತ್ ಮತ್ತು ಅಯ್ಯಪ್ಪ ಹೆಸರಿನ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳ ಮೇಲೆ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಪೊಲೀಸರು ಇವುಗಳ ಪೈಕಿ ಹರ್ಷಿತ್ ವಾಯುಮಾಲಿನ್ಯ ತಪಾಸಣಾ ಕೇಂದ್ರಕ್ಕೆ ಸಂಬಂಧಿಸಿದಂತೆ 'ಬಿ' ರಿಪೋರ್ಟ್ ನೀಡಿದ್ದು, ಉಳಿದ ಕೇಂದ್ರಗಳು ನಿಯಮಗಳನ್ನು ಉಲ್ಲಂಘನೆ ಮಾಡಿರುವುದಾಗಿ ದೃಢೀಕೃತವಾಗಿರುವುದಿಲ್ಲವೆಂದು ವರದಿಯಾಗಿರುತ್ತದೆ.<br><br>ಸಾರಿಗೆ ಇಲಾಖೆ ವತಿಯಿಂದ ಬೆಂಗಳೂರಿನಲ್ಲಿರುವ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ತಪಾಸಣೆಗೆ ಒಳಪಡಿಸಿ ನಿಯಮಬಾಹಿರವಾಗಿ ಕಾರ್ಯಾಚರಣೆ ಮಾಡುತ್ತಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ವರದಿಯನ್ನು ಸಲ್ಲಿಸುವಂತೆ ಅಧೀನ ಕಛೇರಿಗಳಿಗೆ ಸೂಚನೆ ನೀಡಲಾಗಿದ್ದು ಅದರಂತೆ 850 ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ತಪಾಸಣೆಗೆ ಒಳಪಡಿಸಿ 90 ಕೇಂದ್ರಗಳಿಗೆ ಸಂಬಂಧಿಸಿದಂತೆ ಭದ್ರತಾ ಠೇವಣಿಯ ಮೊತ್ತ ರೂ.8,70,000/-ಗಳನ್ನು ದಂಡದ ರೂಪದಲ್ಲಿ |



Generated from eOffice by B SREERAMULU, TD-MIN(BS), TRANSPORT MINISTER, Trans on 16/03/2022 05:50 PM

| | | |
|---|---|---|
| | | ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅಲ್ಲದೇ, ಕರ್ನಾಟಕ ಮೋಟಾರು ವಾಹನ ನಿಯಮಾವಳಿ, 1989ರ ನಿಯಮ 231-ಬಿ ಉಲ್ಲಂಘನೆಗಾಗಿ 2 ಕೇಂದ್ರಗಳ ಅನುಜ್ಞಾ ಪತ್ರಗಳನ್ನು ರದ್ದುಪಡಿಸಲಾಗಿದೆ. |
| ಆ. | ಸರ್ಕಾರದ ನಿಯಮಗಳನ್ವಯ ಬಿಎಸ್-3 ಎಂಜಿನ್ ಹಾಗೂ ಇದಕ್ಕಿಂತ ಮೊದಲಿನ ವಾಹನಗಳು ಪ್ರತಿ 6 ತಿಂಗಳಿಗೆ ಹಾಗೂ ಬಿಎಸ್-4 ಎಂಜಿನ್ ಹೊಂದಿರುವ ವಾಹನಗಳು ವರ್ಷಕ್ಕೊಮ್ಮೆ ಎಮಿಷನ್ ಟೆಸ್ಟ್ ಗೆ ಒಳಪಡಬೇಕೆಂಬ ನಿಯಮಗಳಿದ್ದರೂ, ಎಲ್ಲಾ ಮಾದರಿಯ ವಾಹನಗಳನ್ನು ಪ್ರತಿ 6 ತಿಂಗಳಿಗೊಮ್ಮೆ ವಾಯುಮಾಲಿನ್ಯ ತಪಾಸಣೆಗೆ ಒಳಪಡಿಸುವ ದಂಧೆಯಿಂದಾಗಿ ವಾಹನ ಮಾಲೀಕರಿಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ವಾಯುಮಾಲಿನ್ಯ ತಪಾಸಣಾ ಕೇಂದ್ರಗಳ ಆನ್ ಲೈನ್ ನೆಟ್ ವರ್ಕಿಂಗ್ ಗೆ ತಂತ್ರಾಂಶದಲ್ಲಿನ ದೋಷದಿಂದಾಗಿ ದ್ವಿಚಕ್ರ ವಾಹನಗಳ ಬಿಎಸ್-4 ವಾಹನಗಳಿಗೆ 6 ತಿಂಗಳ ಅವಧಿಯ ವಾಯುಮಾಲಿನ್ಯ ನಿಯಂತ್ರಣದಲ್ಲಿದೆ ಎಂಬ ಪ್ರಮಾಣಪತ್ರವನ್ನು ನೀಡುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಪ್ರಸ್ತುತ ತಂತ್ರಾಂಶದಲ್ಲಿರುವ ದೋಷವನ್ನು ಸರಿಪಡಿಸಲಾಗಿದ್ದು, ಬಿಎಸ್-3 ಮತ್ತು ಅದಕ್ಕಿಂತ ಮೊದಲಿನ ವಾಹನಗಳಿಗೆ 6 ತಿಂಗಳ ಅವಧಿಯನ್ನು ಮತ್ತು ಬಿಎಸ್ -4 ವಾಹನಗಳಿಗೆ 1 ವರ್ಷದ ಅವಧಿಯ ವಾಯುಮಾಲಿನ್ಯ ನಿಯಂತ್ರಣದಲ್ಲಿದೆ ಎಂಬ ಪ್ರಮಾಣಪತ್ರವನ್ನು ವಿತರಿಸಲಾಗುತ್ತಿದೆ. |
| ಇ. | ಈ ದಂಧೆಯಲ್ಲಿ ಸಾರಿಗೆ ಇಲಾಖೆಯ ಅಧಿಕಾರಿಗಳೂ ಸಹ ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಮೇಲ್ಕಂಡಂತೆ ತಪ್ಪು ಎಸಗಿದ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳ ಮೇಲೆ ಕ್ರಮವಹಿಸಲಾಗಿದೆ. ಇಲಾಖೆಯ ಯಾವುದೇ ಅಧಿಕಾರಿಗಳು ಶಾಮೀಲಾಗಿರುವುದಿಲ್ಲ. |
| ಈ. | ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? | |

ಟಿಡಿ 48 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 16/03/2022 05:50 PM